**NOVEMBER 25,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಕೇಂದ್ರ ಪುರಸ್ಕೃತ, ‘ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ ಯೋಜನೆ’, ಹಾಗೂ ಬೆಂಗಳೂರಿನ, ವಿಜನ್ ಫಾರ್ ಸೋಶಿಯಲ್ ಡೆವಲಪ್ಮೆಂಟ್ ಸಂಸ್ಥೆಯ ಸಹಯೋಗದಲ್ಲಿ, ದಾಂಡೇಲಿಯ ಹಾರ್ನ್ ಬಿಲ್ ಭವನದಲ್ಲಿ, ಅಕ್ಷರ ದಾಸೋಹ ಅಡುಗೆ ಸಿಬ್ಬಂದಿಗೆ, ಉಪ್ಪಿನ ಬಳಕೆ ಮತ್ತು ಕಡ್ಡಾಯ ಪಾಲನೆ ಕುರಿತು ಆಯೋಜಿಸಿದ, ತರಬೇತಿ ಕಾರ್ಯಗಾರಕ್ಕೆ, ಹಳಿಯಾಳ ಶಾಸಕ ಆರ್.ವಿ.ದೇಶಪಾಂಡೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಬಾಲ್ಯ ಮತ್ತು ಪ್ರೌಢಾವಸ್ಥೆಯಲ್ಲಿ ಸುದೃಢ ಬೆಳವಣಿಗೆಗೆ ಅವಶ್ಯಕವಾದ, ಪೌಷ್ಟಿಕ ಆಹಾರ ಮಕ್ಕಳು ಸೇವಿಸಬೇಕು. ಈ ಹಂತದಲ್ಲಿ ಭೌತಿಕ ಬೆಳವಣಿಗೆ ಮತ್ತು ಬೌದ್ಧಿಕ ವಿಕಾಸ ಕ್ಷಿಪ್ರಗತಿಯಲ್ಲಿರುತ್ತದೆ. ಅಕ್ಷರ ದಾಸೋಹದ ಮೂಲಕ, ಅವರ ಆರೋಗ್ಯವನ್ನು ಖಾತ್ರಿ ಪಡಿಸಬೇಕು, ಎಂದರು.**

<><><>

**ದೇಶದ ಆರ್ಥಿಕ ಪ್ರಗತಿಯಲ್ಲಿ, ಸ್ತ್ರೀಯರು ಹಾಗೂ ಸ್ತ್ರೀ ಶಕ್ತಿ ಸಂಘಗಳ ಪಾತ್ರ ಮಹತ್ವದ್ದು. ಮೋಟಮ್ಮನವರು ಸಚಿವರಾಗಿದ್ದಾಗ, ಮಹಿಳಾ ಸ್ವಸಹಾಯ ಸಂಘಗಳನ್ನು ರಾಜ್ಯದಲ್ಲಿ ಸಂಘಟಿಸಲಾಯಿತು. ಈಗ ಗೃಹಲಕ್ಷ್ಮೀ ಸಂಘಗಳನ್ನು ಸ್ಥಾಪಿಸುವ ಚಿಂತನೆ ನಡೆದಿದೆ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ. ಕನಕಪುರದಲ್ಲಿ ಜರುಗಿದ, ಮಹಿಳಾ ಜಾಗೃತಿ ಸಮಾವೇಶದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಗೃಹಲಕ್ಷ್ಮೀ ಯೋಜನೆಯ ಮೂಲಕ, ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿಸುವ ಉದ್ದೇಶ ಹೊಂದಿರುವುದಾಗಿ, ಅವರು ಹೇಳಿದರು.**

<><><>

**ಹಿರಿಯ ಸಂಸ್ಕೃತ ವಿದ್ವಾಂಸ, ವೇದಮೂರ್ತಿ, ವಿ ಸ್ಣ ಭಟ್ ಡೋಂಗ್ರೆ ಅವರಿಗೆ ‘ಆದಿಕವಿ ಪುರಸ್ಕಾರ’ ಹಾಗೂ ಲೇಖಕ, ಚಿಂತಕ, ಡಾಕ್ಟರ್ ಜಿ.ಬಿ. ಹರೀಶ ಅವರಿಗೆ, ‘ವಾಗ್ದೇವಿ’ ಪುರಸ್ಕಾರವನ್ನು, ಅಖಿಲ ಭಾರತೀಯ ಸಾಹಿತ್ಯ ಪರಿ ‘ದ್, ಕರ್ನಾಟಕ ಘಟಕದ ವತಿಯಿಂದ, ಪ್ರದಾನ ಮಾಡಿ, ಗೌರವಿಸಲಾಯಿತು. ಚಿಕ್ಕಬಳ್ಳಾಪುರದ ಶ್ರೀಕ್ಷೇತ್ರ ಕೈವಾರದಲ್ಲಿ ಆಯೋಜಿಸಿದ್ದ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಶ್ರೀಕ್ಷೇತ್ರ ಕೈವಾರದ ಧರ್ಮದರ್ಶಿ ಮತ್ತು ಎಂ.ಎಸ್. ರಾಮಯ್ಯ ಸಮೂಹ ಸಂಸ್ಥೆಗಳ ಮುಖ್ಯಸ್ಥ ಡಾಕ್ಟರ್ ಎಂ. ಆರ್. ಜಯರಾಮ, ಅಖಿಲ ಭಾರತೀಯ ಸಾಹಿತ್ಯ ಪರಿಷದ್ ರಾಜ್ಯ ಕಾರ್ಯದರ್ಶಿ ರಘುನಂದನ ಭಟ್, ಸಾಹಿತಿ ದಿವಾಕರ ಹೆಗಡೆ ಸೇರಿದಂತೆ, ಗಣ್ಯರು ಪ್ರಶಸ್ತಿಯನ್ನು ಪ್ರದಾನ ಮಾಡಿದರು.**

<><><>

ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ, ರಾಜಿ ಸಂಧಾನಕ್ಕೆ ಯೋಗ್ಯವಾದ ಪ್ರಕರಣಗಳನ್ನು, ಉಭಯ ಕಕ್ಷಿದಾರರ ಮನವೊಲಿಸಿ, ಬಗೆಹರಿಸಿಕೊಳ್ಳಲು, ವಕೀಲರು ಸಹಕಾರ ನೀಡಬೇಕು ಎಂದು, ಉತ್ತರಕನ್ನಡ ಜಿಲ್ಲೆಯ ಹಿರಿಯ ಸಿವಿಲ್ ನ್ಯಾಯಾಧೀಶರಾದ ನಾಗಮ್ಮ ಇಚ್ಚಂಗಿ ತಿಳಿಸಿದ್ದಾರೆ. ಡಿಸೆಂಬರ್ 14 ರಂದು ಆಯೋಜಿತ, ರಾಷ್ಟ್ರೀಯ ಲೋಕ ಅದಾಲತ್ ಹಿನ್ನೆಲೆ, ಹಳಿಯಾಳದಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ವ್ಯಾಜ್ಯಗಳನ್ನು ಮಧ್ಯಸ್ಥಿಕೆ ಮತ್ತು ಸಂಧಾನದ ಮೂಲಕ, ಕಕ್ಷಿದಾರರು ಬಗೆಹರಿಸಿಕೊಂಡಲ್ಲಿ, ಸಮಯ, ಹಣದೊಂದಿಗೆ, ಪರಸ್ಪರ ಸಹಬಾಳ್ವೆ ಸಾಧ್ಯ ಎಂದರು.

<><><>

ಶಿವಮೊಗ್ಗ ಮಹಾನಗರ ಪಾಲಿಕೆ, ಮೂರು ಕೋಟಿ ರೂಪಾಯಿ ವೆಚ್ಚದಲ್ಲಿ, 'ಉದ್ಯಮ ನಿಧಿ ಯೋಜನೆ' ಅಡಿ, ನೂತನವಾಗಿ ನಿರ್ಮಿಸಿದ ವಾಣಿಜ್ಯ ಸಂಕೀರ್ಣ ಹಾಗೂ ಐವತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿದ, 'ಅಜಿತ ಯೋಗ ಕೇಂದ್ರ'ವನ್ನು, ಸಂಸದ ಬಿ.ವೈ ರಾಘವೇಂದ್ರ, ಶಿವಮೊಗ್ಗದ ವಿನೋಬ ನಗರದಲ್ಲಿ ಉದ್ಘಾಟಿಸಿದರು. ಯೋಗ ಇಂದಿಗೆ ವಿಶ್ವ ಮಾನ್ಯವಾಗಿದೆ. ವಿಶ್ವದ 150 ದೇಶಗಳಲ್ಲಿ ಯೋಗವನ್ನು ಅಭ್ಯಸಿಸುತ್ತಿರುವುದು, ಹೆಮ್ಮೆಯ ವಿಷಯ. ಭಾರತೀಯರ ಯೋಗ ಸಾಧನೆ ಜಗತ್ತಿಗೆ ಅನುಕರಣೀಯ. ಪ್ರಧಾನಮಂತ್ರಿಯವರ ದೂರದೃಷ್ಟಿಯ ಫಲವಾಗಿ, ಭಾರತ ಈಗ ವಿಶ್ವ ಗುರುವಾಗಿ, ಮಾನ್ಯತೆ ಗಳಿಸುತ್ತಿದೆ, ಎಂದರು.

<><><>

ಯಾದಗಿರಿ ಜಿಲ್ಲೆಯ, ಗ್ರಾಮದ ಪ್ರತಿ ಮನೆಯಿಂದ ಬರುವ, ಬೂದು ನೀರನ್ನು ಕ್ರಮಬದ್ಧವಾಗಿ ನಿರ್ವಹಿಸಿ, ಜಲ ಮೂಲಗಳಲ್ಲಿ ಬೆರೆಯದಂತೆ, ಮಹಾತ್ಮ ಗಾಂಧಿ ನರೇಗಾ ಕಾಮಗಾರಿಗಳ ಗುಣಮಟ್ಟ ಖಾತ್ರಿ ಪಡಿಸುವಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಆಯುಕ್ತಾಲಯದ, ಮುಖ್ಯ ಕಾರ್ಯಾಚರಣೆ ಅಧಿಕಾರಿ, ಪಿ.ಜಿ. ವೇಣುಗೋಪಾಲ ಸೂಚಿಸಿದ್ದಾರೆ. ಯಾದಗಿರಿ ತಾಲೂಕಿನ ಬಂದಳ್ಳಿ, ಹಳಿಗೇರಾ ಹಾಗೂ ಗುರುಮಠಕಲ್ ತಾಲೂಕಿನ ಎಲ್ಹೇರಿ, ಅನಪುರ ಗ್ರಾಮಗಳ ಬೂದು ನೀರು ನಿರ್ವಹಣೆ ಕಾಮಗಾರಿಗಳನ್ನು ವೀಕ್ಷಿಸಿ, ಅವರು ಮಾತನಾಡಿದರು.

<><><>

ತುಮಕೂರಿನ ಬೆಳ್ಳಾವಿ ಗೊಲ್ಲಳ್ಳಿ ಬಳಿ, 150 ಕೋಟಿ ರೂಪಾಯಿ ವೆಚ್ಚದಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಅಕಾದೆಮಿ ಹಾಗೂ ಕ್ರೀಡಾಂಗಣ ನಿರ್ಮಾಣಕ್ಕೆ ಡಿಸೆಂಬರ್ 2 ನೇ ತಾರೀಖು, ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು, ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ.

<><><>

ಚಲನಚಿತ್ರ ಮಾಧ್ಯಮ ಅತ್ಯಂತ ಪ್ರಭಾವಿಯಾಗಿದ್ದು, ಒಂದು ಪೀಳಿಗೆಯನ್ನು ಪ್ರಭಾವಿಸುವಷ್ಟು ಶಕ್ತಿಶಾಲಿಯಾಗಿದೆ. ಚಿಂತನೆಗೆ ಮತ್ತು ಚರ್ಚೆಗೆ ಹಾದಿಯಾಗಬಲ್ಲ, ಸದಭಿರುಚಿಯ ಸಿನೆಮಾ ಇಂದಿಗೆ ಹೆಚ್ಚು ಪ್ರಸ್ತುತ ಎಂದು, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರ ಪ್ರಶಸ್ತಿ ಪುರಸ್ಕೃತ, ಹೆಸರಾಂತ ಚಲನಚಿತ್ರ ನಿರ್ದೇಶಕ, ಪಿ.ಶೇಷಾದ್ರಿ ಅವರ, ವೃತ್ತಿ ಜೀವನದ ಬಗೆಗಿನ, ಸಿನಿಮಾ ಪಯಣದ ಪುಸ್ತಕವನ್ನು, ಬೆಂಗಳೂರಿನ ಸುಚಿತ್ರಾ ಫಿಲಂ ಸೊಸಾಯಿಟಿ ಸಭಾಂಗಣದಲ್ಲಿ, ಅವರು ಬಿಡುಗಡೆ ಮಾಡಿ, ಮಾತನಾಡಿದರು. ಖ್ಯಾತ ನಿರ್ದೇಶಕರುಗಳಾದ, ಟಿ.ಎಸ್. ನಾಗಾಭರಣ, ರಾಜೇಂದ್ರ ಸಿಂಗ್ ಬಾಬು, ಗಿರೀಶ್ ಕಾಸರವಳ್ಳಿ, ಟಿ.ಎನ್.ಸೀತಾರಾಂ ಹಾಗೂ ಕೃತಿಯ ಸಂಪಾದಕ ಗೋಪಾಲಕೃಷ್ಣ ಪೈ ಪಾಲ್ಗೊಂಡಿದ್ದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**

<><><>